RNI No. KARBIL/2001/47147

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ



| | | |
|---|---|---|
| ಭಾಗ-V | ಬೆಂಗಳೂರು, ಗುರುವಾರ, ಸೆಪ್ಟೆಂಬರ್ ೨೯, ೨೦೧೬ (ಆಶ್ವಯುಜ ೭, ಶಕ ವರ್ಷ ೧೯೩೮) | ನಂ. ೧೧೪೧ |
| Part-V | Bengaluru, Thursday, September 29, 2016 (Aashwayuja 7, Shaka Varsha 1938) | No. 1141 |



**ಸಾರ್ವಜನಿಕ ಶಿಕ್ಷಣ ಇಲಾಖೆ**

**ಆಯ್ಕೆ ಪ್ರಾಧಿಕಾರಿ ಹಾಗೂ ವಿಭಾಗೀಯ ಸಹನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ,**

**ಆಯುಕ್ತರ ಕಛೇರಿ, ಕಲುಬುರಗಿ ವಿಭಾಗ, ಕಲುಬುರಗಿ ಇವರ ಕಾರ್ಯಾಲಯ.**

**ತಿದ್ದುಪಡಿ ಅಧಿಸೂಚನೆ**

**ಸಂಖ್ಯೆ: ಅ1/ಪ್ರೌಶಾಶಿನೇ 01/2014-15, ದಿನಾಂಕ: 29.09.2016**

ವಿಷಯ:- 2014-15ನೇ ಸಾಲಿನಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ, ಕಲುಬುರಗಿ ವಿಭಾಗ, ಮಟ್ಟದಲ್ಲಿ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಸರ್ಕಾರಿ ಪ್ರೌಢ ಶಾಲೆಗಳು, ಆಂಗ್ಲ ಮಾಧ್ಯಮದ ಆದರ್ಶ ವಿದ್ಯಾಲಯಗಳು ಮತ್ತು ಆರ್.ಎಂ.ಎಸ್.ಎ ಅಡಿಯಲ್ಲಿ ಉನ್ನತೀಕರಿಸಲಾದ ಸರ್ಕಾರಿ ಪ್ರೌಢಶಾಲಾ ಸಹಾಯಕ ಶಿಕ್ಷಕರು ಗ್ರೇಡ್-2 ಹಾಗೂ ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-1 ವೃಂದದ ಹುದ್ದೆಗಳಿಗೆ ನೇರ ನೇಮಕಾತಿ ಮೂಲಕ ಶಿಕ್ಷಕರನ್ನು ಆಯ್ಕೆ ಮಾಡುವ ಕುರಿತು.

ಉಲ್ಲೇಖ:-
1. ಸಂಖ್ಯೆ: ಇ1/ಪ್ರೌಶಾಶಿನೇ 01/2014-15, ದಿನಾಂಕ: 23.03.2015.
2. ರಿಟ್ಟ ಅರ್ಜಿ ಸಂಖ್ಯೆ :2772/2012 ಮತ್ತು ರಿಟ್ ಪಿಟಿಷನ್ :69822-69826/2012 (ಎಸ್-ಕೆಎಟಿ) ತೀರ್ಪು ದಿನಾಂಕ: 30.07.2015
3. ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿ ಆದೇಶ ಸಂಖ್ಯೆ : ಇಡಿ 291 ಎಲ್.ಬಿ.ಪಿ. 2015 ದಿನಾಂಕ: 29.09.2016.
4. ಮಾನ್ಯ ನಿರ್ದೇಶಕರು (ಪ್ರೌಢಶಿಕ್ಷಣ) ಇವರ ಪತ್ರ ಸಂಖ್ಯೆ: ಸಿ4(1)ಪ್ರೌ.ಶಿನೇ07/2015-16 ದಿನಾಂಕ:29.09.2016

ಸಾರ್ವಜನಿಕ ಶಿಕ್ಷಣ ಇಲಾಖೆ ಕಲಬುರಗಿ ವಿಭಾಗದ 06 ಶೈಕ್ಷಣಿಕ ಜಿಲ್ಲೆಗಳ( ಬಳ್ಳಾರಿ, ಬೀದರ, ಕಲಬುರಗಿ, ಕೊಪ್ಪಳ, ರಾಯಚೂರು, ಯಾದಗೀರ) ಸರ್ಕಾರಿ ಪ್ರೌಢ ಶಾಲೆಗಳು, ಆಂಗ್ಲ ಮಾಧ್ಯಮದ ಆದರ್ಶ ವಿದ್ಯಾಲಯಗಳು ಮತ್ತು ಆರ್.ಎಂ.ಎಸ್.ಎ ಅಡಿಯಲ್ಲಿ ಉನ್ನತೀಕರಿಸಲಾದ ಸರ್ಕಾರಿ ಪ್ರೌಢಶಾಲಾ ಸಹ ಶಿಕ್ಷಕರು ಗ್ರೇಡ್-2 ಹಾಗೂ ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-1 ವೃಂದದ (ವಿವಿಧ ವಿಷಯ ಮತ್ತು ಬೋಧನಾ ಮಾಧ್ಯಮ) ಹುದ್ದೆಗಳಿಗೆ ವಿಭಾಗ ಮಟ್ಟದಲ್ಲಿ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಅಂದರೆ "**ದಿ ಕರ್ನಾಟಕ ಎಜುಕೇಷನ್ ಡಿಪಾರ್ಟ್‌ಮೆಂಟ್ ಸರ್ವೀಸಸ್ (ಡಿಪಾರ್ಟ್‌ಮೆಂಟ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್) (ರಿಕ್ರೂಟ್‌ಮೆಂಟ್) (ಅಮೆಂಡ್‌ಮೆಂಟ್) ರೂಲ್ಸ್ 2002**" ನಿಯಮಗಳನ್ವಯ ಆಯ್ಕೆ ಮಾಡಲು ಈ ನೇಮಕಾತಿ ಅಧಿಸೂಚನೆ ಹೊರಡಿಸಿ ಉಲ್ಲೇಖ-1 ರಲ್ಲಿ ಅಧಿಸೂಚನೆ ಹೊರಡಿಸಲಾಗಿತ್ತು.

ಆದರೆ ಉಲ್ಲೇಖ-2 ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯ, ಧಾರವಾಡ ಪೀಠ, ರಿಟ್ ಅರ್ಜಿ ಸಂಖ್ಯೆ : 2772/2012 ಮತ್ತು ರಿಟ್ ಪಿಟಿಷನ್ :69822-69826/2012 (ಎಸ್-ಕೆಎಟಿ) ತೀರ್ಪು ದಿನಾಂಕ: 30.07.2015 ರಲ್ಲಿ ತೀರ್ಪು ನೀಡಿ, ದಿನಾಂಕ: 24.06.2003 ರ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರದ್ದುಪಡಿಸಿದ ಹಿನ್ನೆಲೆಯಲ್ಲಿ, ಸದರಿ ನೇಮಕಾತಿಗೆ ಸಂಬಂಧಿಸಿದಂತೆ,

ಉಲ್ಲೇಖ–3 ರಲ್ಲಿ ಸದರಿ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಸರ್ಕಾರವು ತಿದ್ದುಪಡಿ ಮಾಡಿರುತ್ತದೆ. ಉಲ್ಲೇಖ–4 ರಲ್ಲಿ ಮಾನ್ಯ ನಿರ್ದೇಶಕರು (ಪ್ರೌಢಶಿಕ್ಷಣ) ಬೆಂಗಳೂರು ಇವರು ತಿದ್ದುಪಡಿಯಾದ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಅನುಗುಣವಾಗಿ ನೇಮಕಾತಿಯನ್ನು ಮುಂದುವರೆಸಲು ಆದೇಶಿಸಿರುವ ಹಿನ್ನೆಲೆಯಲ್ಲಿ, ಈಗಾಗಲೇ ಉಲ್ಲೇಖ–1ರಲ್ಲಿ ಅಧಿಸೂಚಿಸಿದಂತೆ ಅರ್ಜಿ ಸಲ್ಲಿಸಿ, ಸಂಯುಕ್ತ ಸ್ವರ್ಧಾತ್ಮಕ ಪರೀಕ್ಷೆ ಬರೆದಿರುವ ಅಭ್ಯರ್ಥಿಗಳಿಗೆ ಸಂಬಂಧಪಟ್ಟಂತೆ, ಶೈಕ್ಷಣಿಕ ವಿದ್ಯಾರ್ಹತೆ ಮತ್ತು ವೃಂದಗಳಿಗೆ ಸಂಬಂಧಿಸಿದಂತೆ, ಈ ಕೆಳಕಂಡಂತೆ ಬದಲಾವಣೆಗಳಿಗೊಳಪಟ್ಟು, ನೇಮಕಾತಿಯನ್ನು ಮುಂದುವರೆಸುವ ಸಂಬಂಧವಾಗಿ ಈ ತಿದ್ದುಪಡಿ ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ಉಲ್ಲೇಖ–1 ಕ್ಕೆ ಪೂರಕವಾಗಿ ಓದಿಕೊಳ್ಳುವುದು.

**ವಿದ್ಯಾರ್ಹತೆಗಳು:–**

**ಅಭ್ಯರ್ಥಿಗಳು ನೇಮಕಾತಿ ತಿದ್ದುಪಡಿ ಅಧಿಸೂಚನೆ ದಿನಾಂಕದಂದು** **"ದಿ ಕರ್ನಾಟಕ ಎಜುಕೇಷನ್ ಡಿಪಾರ್ಟ್‌ಮೆಂಟ್ ಸರ್ವೀಸಸ್ (ಡಿಪಾರ್ಟ್‌ಮೆಂಟ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್) (ರಿಕ್ರೂಟ್‌ಮೆಂಟ್) (ಅಮೆಂಡ್‌ಮೆಂಟ್) ರೂಲ್ಸ್ 2016"** ನಿಯಮಗಳಲ್ಲಿ ನಿಗದಿಪಡಿಸಿರುವಂತೆ, ಪ್ರೌಢ ಶಾಲಾ ಸಹಾಯಕ ಶಿಕ್ಷಕ ಗ್ರೇಡ್–2 ವೃಂದದ (ವಿವಿಧ ವಿಷಯಗಳು ಮತ್ತು ಬೋಧನಾ ಮಾಧ್ಯಮದ) ಮತ್ತು ದೈಹಿಕ ಶಿಕ್ಷಣ ಶಿಕ್ಷಕ ಗ್ರೇಡ್–1 ವೃಂದದ ಹುದ್ದೆಗಳಿಗೆ ಹೊಂದಿರಬೇಕಾದ ವಿದ್ಯಾರ್ಹತೆಗಳ ವಿವರಗಳು ಈ ಮುಂದೆ ತಿಳಿಸಿದಂತಿರುತ್ತದೆ.

## (ಅ) ಕಲಾ ಶಿಕ್ಷಕರ (ಕನ್ನಡ, ಆಂಗ್ಲ , ಮತ್ತು ಉರ್ದು ಮಾಧ್ಯಮ) ಹುದ್ದೆಗಳಿಗೆ (Arts Teacher) (Kannada,English, & Urdu Medium):-

**i)** ಅಭ್ಯರ್ಥಿಯು ಭಾರತ ದೇಶದ ಕಾನೂನಿನಂತೆ ಸ್ಥಾಪಿಸಲ್ಪಟ್ಟ ಮತ್ತು ವಿಶ್ವವಿದ್ಯಾಲಯ ಧನ ಸಹಾಯ ಆಯೋಗದಿಂದ ಅಂಗೀಕೃತವಾದ ಒಂದು ವಿಶ್ವವಿದ್ಯಾಲಯದ **"ಬ್ಯಾಚಲರ್ ಆಫ್ ಆರ್ಟ್ಸ್"** (ಬಿ.ಎ) ಪದವೀಧರರಾಗಿದ್ದು, ಈ ಪದವಿ ಪರೀಕ್ಷೆಯಲ್ಲಿ **"ಇತಿಹಾಸ, ಅರ್ಥಶಾಸ್ತ್ರ, ಭೂಗೋಳ ಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜ ಶಾಸ್ತ್ರ** ಇವುಗಳಲ್ಲಿ ಯಾವುದಾದರೂ **ಎರಡು ಐಚ್ಛಿಕ ವಿಷಯಗಳನ್ನು** ಅಧ್ಯಯನ ಮಾಡಿರಬೇಕು.

**ಮತ್ತು**

**ii]** ಭಾರತ ದೇಶದ ಕಾನೂನಿನಂತೆ ಸ್ಥಾಪಿಸಲ್ಪಟ್ಟ ಮತ್ತು ವಿಶ್ವವಿದ್ಯಾಲಯ ಧನ ಸಹಾಯ ಆಯೋಗದಿಂದ ಅಂಗೀಕೃತವಾದ ಒಂದು ವಿಶ್ವವಿದ್ಯಾನಿಲಯದಿಂದ **ಬ್ಯಾಚುಲರ್ ಆಫ್ ಎಜ್ಯುಕೇಶನ್ (ಬಿ.ಇಡಿ)** ಪದವಿಯನ್ನು ಪಡೆದಿರಬೇಕು.

**ಹಾಗೂ**

**iii)** ಬೋಧನಾ ಮಾಧ್ಯಮದ ಭಾಷೆಯನ್ನು ಅಭ್ಯರ್ಥಿಯು **ಬ್ಯಾಚುಲರ್ ಆಫ್ ಆರ್ಟ್ಸ್ (ಬಿ.ಎ)** ಪದವಿಯಲ್ಲಿ ಒಂದು ಭಾಷೆಯನ್ನಾಗಿ ಅಧ್ಯಯನ ಮಾಡಿರಬೇಕು.

**ಅಥವಾ**

ಬೋಧನಾ ಮಾಧ್ಯಮದ ಭಾಷೆಯನ್ನು ಬಿ.ಎ. ಪದವಿಯಲ್ಲಿ ಅಧ್ಯಯನ ಮಾಡದೆ ಇದ್ದಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಬೋಧನಾ ಮಾಧ್ಯಮದ ಭಾಷೆಯನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯನ್ನಾಗಿ ಅಧ್ಯಯನ ಮಾಡಿರಬೇಕು.

**ಅಥವಾ**

ಎಸ್.ಎಸ್.ಎಲ್.ಸಿ. ಅಥವಾ ಬಿ.ಎ., ಪದವಿ ಪರೀಕ್ಷೆಯನ್ನು **ಬೋಧನಾ ಮಾಧ್ಯಮದ** ಭಾಷೆಯ ಮಾಧ್ಯಮದಲ್ಲಿ ಅಧ್ಯಯನ ಮಾಡಿರಬೇಕು.

**ಅಥವಾ**

ಭಾರತ ದೇಶದ ಕಾನೂನಿನಂತೆ ಸ್ಥಾಪಿಸಲ್ಪಟ್ಟ ಮತ್ತು ವಿಶ್ವವಿದ್ಯಾಲಯ ಧನ ಸಹಾಯ ಆಯೋಗದಿಂದ ಅಂಗೀಕೃತವಾದ ಒಂದು ವಿಶ್ವವಿದ್ಯಾನಿಲಯದಿಂದ ಸಂಬಂಧಿಸಿದ ಬೋಧನಾ ಮಾಧ್ಯಮದ ಭಾಷೆಯಲ್ಲಿ **ಡಿಪ್ಲೋಮಾ** ಹೊಂದಿರಬೇಕು.

ಕನ್ನಡ ಮಾಧ್ಯಮದಲ್ಲಿ ಬೋಧಿಸುವ ವಿಷಯಗಳಿಗೆ ಸಂಬಂಧಿಸಿದಂತೆ ಮೇಲೆ ತಿಳಿಸಿದ ನಿಬಂಧನೆಗಳ ಪ್ರಕಾರ ಇಲ್ಲದಿದ್ದಲ್ಲಿ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು ಅಥವಾ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಇವರುಗಳ ವತಿಯಿಂದ ನಡೆಸಲ್ಪಡುವ ಕನ್ನಡ ಸರ್ಟಿಫಿಕೇಟ್ ಕೋರ್ಸ್‌ನಲ್ಲಿ ಉತ್ತೀರ್ಣತೆ ಹೊಂದಿರಬೇಕು.

## (ಆ) ಭೌತ ವಿಜ್ಞಾನ ಶಿಕ್ಷಕರ (ಕನ್ನಡ, ಆಂಗ್ಲ ಮತ್ತು ಉರ್ದು ಮಾಧ್ಯಮ) ಹುದ್ದೆಗಳಿಗೆ (Physical Science Teacher (Kannada, English & Urdu Medium):-

**i)** ಅಭ್ಯರ್ಥಿಯು ಭಾರತ ದೇಶದ ಕಾನೂನಿನಂತೆ ಸ್ಥಾಪಿಸಲ್ಪಟ್ಟ ಮತ್ತು ವಿಶ್ವವಿದ್ಯಾಲಯ ಧನ ಸಹಾಯ ಆಯೋಗದಿಂದ ಅಂಗೀಕೃತವಾದ ಒಂದು ವಿಶ್ವವಿದ್ಯಾಲಯದ **"ಬ್ಯಾಚಲರ್ ಆಫ್ ಸೈನ್ಸ್"** (ಬಿ.ಎಸ್ಸಿ) ಪದವೀಧರರಾಗಿದ್ದು, ಈ ಪದವಿ ಪರೀಕ್ಷೆಯಲ್ಲಿ ಈ ಕೆಳಕಂಡ ಐಚ್ಛಿಕ ವಿಷಯಗಳಲ್ಲಿ ಎರಡು ಐಚ್ಛಿಕ ವಿಷಯಗಳನ್ನು ಅಧ್ಯಯನ ಮಾಡಿರಬೇಕು. ಇದರಲ್ಲಿ **"ಗಣಿತ ಶಾಸ್ತ್ರ"** ಐಚ್ಛಿಕ ವಿಷಯವನ್ನು ಕಡ್ಡಾಯವಾಗಿ ಅಧ್ಯಯನ ಮಾಡಿರಬೇಕು.

**"ಭೌತಶಾಸ್ತ್ರ, ಗಣಿತಶಾಸ್ತ್ರ, ರಸಾಯನ ಶಾಸ್ತ್ರ"**
**ಅಥವಾ**
**"ಭೌತಶಾಸ್ತ್ರ, ಗಣಿತಶಾಸ್ತ್ರ, ಕಂಪ್ಯೂಟರ್ ಸೈನ್ಸ್"**
**ಅಥವಾ**
**"ಭೌತಶಾಸ್ತ್ರ, ಗಣಿತಶಾಸ್ತ್ರ, ಎಲೆಕ್ಟ್ರಾನಿಕ್ಸ್"**
**ಮತ್ತು**

**ii)** ಭಾರತ ದೇಶದ ಕಾನೂನಿನಂತೆ ಸ್ಥಾಪಿಸಲ್ಪಟ್ಟ ಮತ್ತು ವಿಶ್ವವಿದ್ಯಾಲಯ ಧನ ಸಹಾಯ ಆಯೋಗದಿಂದ ಅಂಗೀಕೃತವಾದ ಒಂದು ವಿಶ್ವವಿದ್ಯಾಲಯದಿಂದ **"ಬ್ಯಾಚಲರ್ ಆಫ್ ಎಜುಕೇಷನ್''** (ಬಿ.ಇಡಿ.,) ಪದವಿ ಪಡೆದಿರಬೇಕು.

**ಹಾಗೂ**

**iii)** ಬೋಧನಾ ಮಾಧ್ಯಮದ ಭಾಷೆಯನ್ನು ಅಭ್ಯರ್ಥಿಯು **"ಬ್ಯಾಚಲರ್ ಆಫ್ ಸೈನ್ಸ್"** (ಬಿ.ಎಸ್ಸಿ) ಪದವಿಯಲ್ಲಿ ಒಂದು ಭಾಷೆಯನ್ನಾಗಿ ಅಧ್ಯಯನ ಮಾಡಿರಬೇಕು.

**ಅಥವಾ**

ಬೋಧನಾ ಮಾಧ್ಯಮದ ಭಾಷೆಯನ್ನು ಬಿ.ಎಸ್ಸಿ. ಪದವಿಯಲ್ಲಿ ಅಧ್ಯಯನ ಮಾಡದೆ ಇದ್ದಲ್ಲಿ **ಎಸ್.ಎಸ್.ಎಲ್.ಸಿ.** ಪರೀಕ್ಷೆಯಲ್ಲಿ ಬೋಧನಾ ಮಾಧ್ಯಮದ ಭಾಷೆಯನ್ನು **ಪ್ರಥಮ ಅಥವಾ ದ್ವಿತೀಯ** ಭಾಷೆಯನ್ನಾಗಿ ಅಧ್ಯಯನ ಮಾಡಿರಬೇಕು.

**ಅಥವಾ**

ಎಸ್.ಎಸ್.ಎಲ್.ಸಿ. ಅಥವಾ ಬಿ.ಎಸ್ಸಿ. ಪದವಿ ಪರೀಕ್ಷೆಯನ್ನು **ಬೋಧನಾ ಮಾಧ್ಯಮದ** ಭಾಷೆಯ ಮಾಧ್ಯಮದಲ್ಲಿ ಅಧ್ಯಯನ ಮಾಡಿರಬೇಕು.

**ಅಥವಾ**

ಭಾರತ ದೇಶದ ಕಾನೂನಿನಂತೆ ಸ್ಥಾಪಿಸಲ್ಪಟ್ಟ ಮತ್ತು ವಿಶ್ವವಿದ್ಯಾಲಯ ಧನ ಸಹಾಯ ಆಯೋಗದಿಂದ ಅಂಗೀಕೃತವಾದ ಒಂದು ವಿಶ್ವವಿದ್ಯಾಲಯದಿಂದ, ಸಂಬಂಧಿಸಿದ ಬೋಧನಾ ಮಾಧ್ಯಮದ ಭಾಷೆಯಲ್ಲಿ **ಡಿಪ್ಲೋಮಾ ವನ್ನು** ಹೊಂದಿರಬೇಕು.

ಕನ್ನಡ ಮಾಧ್ಯಮದಲ್ಲಿ ಬೋಧಿಸುವ ವಿಷಯಗಳಿಗೆ ಸಂಬಂಧಿಸಿದಂತೆ ಮೇಲೆ ತಿಳಿಸಿದ ನಿಬಂಧನೆಗಳ ಪ್ರಕಾರ ಇಲ್ಲದಿದ್ದಲ್ಲಿ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು ಅಥವಾ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಇವರುಗಳ ವತಿಯಿಂದ ನಡೆಸಲ್ಪಡುವ ಕನ್ನಡ ಸರ್ಟಿಫಿಕೇಟ್ ಕೋರ್ಸ್‌ನಲ್ಲಿ ಉತ್ತೀರ್ಣತೆ ಪಡೆದಿರಬೇಕು.

## (ಇ) ಜೀವ ವಿಜ್ಞಾನ ಶಿಕ್ಷಕರ (ಕನ್ನಡ,ಆಂಗ್ಲ ಮತ್ತು ಉರ್ದು ಮಾಧ್ಯಮ) ಹುದ್ದೆಗಳಿಗೆ (Biological Science Teacher (Kannada,English & Urdu Medium):-

**i)** ಅಭ್ಯರ್ಥಿಯು, ಭಾರತ ದೇಶದ ಕಾನೂನಿನಂತೆ ಸ್ಥಾಪಿಸಲ್ಪಟ್ಟ ಮತ್ತು ವಿಶ್ವವಿದ್ಯಾಲಯ ಧನ ಸಹಾಯ ಆಯೋಗದಿಂದ ಅಂಗೀಕೃತವಾದ ಒಂದು ವಿಶ್ವವಿದ್ಯಾಲಯದ **"ಬ್ಯಾಚಲರ್ ಆಫ್ ಸೈನ್ಸ್"** (ಬಿ.ಎಸ್ಸಿ) ಪದವೀಧರರಾಗಿದ್ದು, ಈ ಪದವಿ ಪರೀಕ್ಷೆಯಲ್ಲಿ **ರಸಾಯನ ಶಾಸ್ತ್ರ, ಸಸ್ಯಶಾಸ್ತ್ರ ಮತ್ತು ಪ್ರಾಣಿಶಾಸ್ತ್ರ** ಈ ಐಚ್ಛಿಕ

ವಿಷಯಗಳಲ್ಲಿ ಎರಡು ಐಚ್ಛಿಕ ವಿಷಯಗಳನ್ನು ಅಧ್ಯಯನ ಮಾಡಿರಬೇಕು. ಹಾಗೂ ಇದರಲ್ಲಿ **"ರಸಾಯನಶಾಸ್ತ್ರ "** ಐಚ್ಛಿಕ ವಿಷಯವನ್ನು ಕಡ್ಡಾಯವಾಗಿ ಅಧ್ಯಯನ ಮಾಡಿರಬೇಕು.

**ಮತ್ತು**

**ii)** ಭಾರತ ದೇಶದ ಕಾನೂನಿನಂತೆ ಸ್ಥಾಪಿಸಲ್ಪಟ್ಟ ಮತ್ತು ವಿಶ್ವವಿದ್ಯಾಲಯ ಧನ ಸಹಾಯ ಆಯೋಗದಿಂದ ಅಂಗೀಕೃತವಾದ ಒಂದು ವಿಶ್ವವಿದ್ಯಾಲಯದಿಂದ **"ಬ್ಯಾಚಲರ್ ಆಫ್ ಎಜುಕೇಷನ್"** (ಬಿ.ಎಡ್) ಪದವಿ ಪಡೆದಿರಬೇಕು.

**ಹಾಗೂ**

**iii)** ಬೋಧನಾ ಮಾಧ್ಯಮದ ಭಾಷೆಯನ್ನು ಅಭ್ಯರ್ಥಿಯು **"ಬ್ಯಾಚಲರ್ ಆಫ್ ಸೈನ್ಸ್"** (ಬಿ.ಎಸ್ಸಿ) ಪದವಿಯಲ್ಲಿ ಒಂದು ಭಾಷೆಯನ್ನಾಗಿ ಅಧ್ಯಯನ ಮಾಡಿರಬೇಕು.

**ಅಥವಾ**

ಬೋಧನಾ ಮಾಧ್ಯಮದ ಭಾಷೆಯನ್ನು ಬಿ.ಎಸ್ಸಿ. ಪದವಿಯಲ್ಲಿ ಅಧ್ಯಯನ ಮಾಡದೆ ಇದ್ದಲ್ಲಿ **ಎಸ್.ಎಸ್.ಎಲ್.ಸಿ.** ಪರೀಕ್ಷೆಯಲ್ಲಿ ಬೋಧನಾ ಮಾಧ್ಯಮದ ಭಾಷೆಯನ್ನು **ಪ್ರಥಮ ಅಥವಾ ದ್ವಿತೀಯ** ಭಾಷೆಯನ್ನಾಗಿ ಅಧ್ಯಯನ ಮಾಡಿರಬೇಕು.

**ಅಥವಾ**

ಎಸ್.ಎಸ್.ಎಲ್.ಸಿ. ಅಥವಾ ಬಿ.ಎಸ್ಸಿ. ಪದವಿ ಪರೀಕ್ಷೆಯನ್ನು **ಬೋಧನಾ ಮಾಧ್ಯಮದ** ಭಾಷೆಯ ಮಾಧ್ಯಮದಲ್ಲಿ ಅಧ್ಯಯನ ಮಾಡಿರಬೇಕು.

**ಅಥವಾ**

ಭಾರತ ದೇಶದ ಕಾನೂನಿನಂತೆ ಸ್ಥಾಪಿಸಲ್ಪಟ್ಟ ಮತ್ತು ವಿಶ್ವವಿದ್ಯಾಲಯ ಧನ ಸಹಾಯ ಆಯೋಗದಿಂದ ಅಂಗೀಕೃತವಾದ ಒಂದು ವಿಶ್ವವಿದ್ಯಾಲಯದಿಂದ, ಸಂಬಂಧಿಸಿದ ಬೋಧನಾ ಮಾಧ್ಯಮದ ಭಾಷೆಯಲ್ಲಿ **'ಡಿಪ್ಲೋಮಾ' ವನ್ನು** ಹೊಂದಿರಬೇಕು.

ಕನ್ನಡ ಮಾಧ್ಯಮದಲ್ಲಿ ಬೋಧಿಸುವ ವಿಷಯಗಳಿಗೆ ಸಂಬಂಧಿಸಿದಂತೆ ಮೇಲೆ ತಿಳಿಸಿದ ನಿಬಂಧನೆಗಳ ಪ್ರಕಾರ ಇಲ್ಲದಿದ್ದಲ್ಲಿ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು ಅಥವಾ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಇವರುಗಳ ವತಿಯಿಂದ ನಡೆಸಲ್ಪಡುವ ಕನ್ನಡ ಸರ್ಟಿಫಿಕೇಟ್ ಕೋರ್ಸ್‌ನಲ್ಲಿ ಉತ್ತೀರ್ಣತೆ ಪಡೆದಿರಬೇಕು.

**(ಈ) ಭಾಷಾ ಶಿಕ್ಷಕರ ಹುದ್ದೆಗಳಿಗೆ (Language Assistants):–**

**i)** ಅಭ್ಯರ್ಥಿಯು ಭಾರತ ದೇಶದ ಕಾನೂನಿನಂತೆ ಸ್ಥಾಪಿಸಲ್ಪಟ್ಟ ಮತ್ತು ವಿಶ್ವವಿದ್ಯಾಲಯ ಧನ ಸಹಾಯ ಆಯೋಗದಿಂದ ಅಂಗೀಕೃತವಾದ ಒಂದು ವಿಶ್ವವಿದ್ಯಾಲಯದ **"ಬ್ಯಾಚಲರ್ ಆಫ್ ಆರ್ಟ್ಸ್"** (ಬಿ.ಎ) ಪದವೀಧರರಾಗಿದ್ದು, ಈ ಪದವಿ ಪರೀಕ್ಷೆಯಲ್ಲಿ ಸಂಬಂಧಿಸಿದ ಭಾಷಾ ಶಿಕ್ಷಕರ ಹುದ್ದೆಗೆ ಅನುಗುಣವಾದ ಭಾಷೆಯನ್ನು ಒಂದು ಐಚ್ಛಿಕ ವಿಷಯವನ್ನಾಗಿ (Optional) ಅಧ್ಯಯನ ಮಾಡಿರಬೇಕು. ಭಾಷೆಗಳು ಅಂದರೆ **ಕನ್ನಡ, ಇಂಗ್ಲೀಷ್, ಹಿಂದಿ, ಉರ್ದು, ತಮಿಳು, ತೆಲುಗು, ಮರಾಠಿ ಮತ್ತು ಸಂಸ್ಕೃತ.**

**ಮತ್ತು**

**ii)** ಭಾರತ ದೇಶದ ಕಾನೂನಿನಂತೆ ಸ್ಥಾಪಿಸಲ್ಪಟ್ಟ ಮತ್ತು ವಿಶ್ವವಿದ್ಯಾಲಯ ಧನ ಸಹಾಯ ಆಯೋಗದಿಂದ ಅಂಗೀಕೃತವಾದ ಒಂದು ವಿಶ್ವವಿದ್ಯಾಲಯದಿಂದ **"ಬ್ಯಾಚಲರ್ ಆಫ್ ಎಜುಕೇಷನ್"** (ಬಿ.ಇಡಿ.) ಪದವಿ ಪಡೆದಿರಬೇಕು.

**ಬ್ಯಾಚುಲರ್ ಪದವಿಯಲ್ಲಿ ಸಂಬಂಧಿಸಿದ ಭಾಷಾ ಶಿಕ್ಷಕರ ಹುದ್ದೆಗೆ ಅನುಗುಣವಾದ ಭಾಷಾ ಐಚ್ಛಿಕ ವಿಷಯವನ್ನು ಅಧ್ಯಯನ ಮಾಡದೆ ಇದ್ದಲ್ಲಿ ಅಂಥಹ ಅಭ್ಯರ್ಥಿಗಳು;**

**a)** ಸಂಬಂದಿಸಿದ ಭಾಷಾ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು **(Post Graduate Degree)** ಹೊಂದಿದ್ದಲ್ಲಿ ಸಂಬಂಧಿಸಿದ ಭಾಷಾ ಶಿಕ್ಷಕರ ಹುದ್ದೆಗೆ ಪರಿಗಣಿಸಲು ಅರ್ಹತೆ ಪಡೆಯುತ್ತಾರೆ.

**b)** ಹಿಂದಿ ಭಾಷಾ ಶಿಕ್ಷಕರ ಹುದ್ದೆಗೆ ಅಭ್ಯರ್ಥಿಯು, ಭಾರತ ದೇಶದ ಕಾನೂನಿನಂತೆ ಸ್ಥಾಪಿಸಲ್ಪಟ್ಟ ಮತ್ತು ವಿಶ್ವವಿದ್ಯಾಲಯ ಧನ ಸಹಾಯ ಆಯೋಗದಿಂದ ಅಂಗೀಕೃತವಾದ ಒಂದು ವಿಶ್ವವಿದ್ಯಾಲಯದ **ಬ್ಯಾಚುಲರ್ ಪದವೀಧರರಾಗಿದ್ದು,** ಈ ಪದವಿಯಲ್ಲಿ **ಹಿಂದಿ**ಯನ್ನು ಒಂದು ಐಚ್ಛಿಕ ವಿಷಯವನ್ನಾಗಿ ಅಧ್ಯಯನ ಮಾಡಿರಬೇಕು.

**ಮತ್ತು**

ಭಾರತ ದೇಶದ ಕಾನೂನಿನಂತೆ ಸ್ಥಾಪಿಸಲ್ಪಟ್ಟ ಮತ್ತು ವಿಶ್ವವಿದ್ಯಾಲಯ ಧನ ಸಹಾಯ ಆಯೋಗದಿಂದ ಅಂಗೀಕೃತವಾದ ಒಂದು ವಿಶ್ವವಿದ್ಯಾಲಯದಿಂದ **ಬ್ಯಾಚುಲರ್ ಆಫ್ ಎಜುಕೇಷನ್ (ಬಿ.ಇಡಿ.,)** ಪದವೀಧರರಾಗಿದ್ದು, ಈ ಪದವಿ ಪರೀಕ್ಷೆಯಲ್ಲಿ ಸಂಬಂಧಿಸಿದ ವಿಷಯವನ್ನು ಬೋಧನಾ ವಿಧಾನವನ್ನಾಗಿ ಅಧ್ಯಯನ ಮಾಡಿರಬೇಕು.

ವಿಶೇಷ ಸೂಚನೆ:– ಮೇಲ್ಕಂಡ ಪ್ರಕರಣಗಳಲ್ಲಿ ಅಭ್ಯರ್ಥಿಯು ಬ್ಯಾಚುಲರ್ ಪದವಿ ಮತ್ತು ಬ್ಯಾಚುಲರ್ ಆಫ್ ಎಜುಕೇಷನ್ ಪದವಿ ಪರೀಕ್ಷೆಗಳಲ್ಲಿ ಪಡೆದಿರುವ ಅಂಕಗಳನ್ನು ಮಾತ್ರ ಮೆರಿಟ್ ಕಂಡುಕೊಳ್ಳಲು ಪರಿಗಣಿಸಲಾಗುತ್ತದೆ. ಆದರೆ ಸ್ನಾತಕೋತ್ತರ ಮತ್ತು ಡಿಪ್ಲೋಮಾ ಪರೀಕ್ಷೆಗಳಲ್ಲಿ ಪಡೆದಿರುವ ಅಂಕಗಳನ್ನು ಮೆರಿಟ್ ಕಂಡು ಹಿಡಿಯಲು ಗಣನೆಗೆ ತೆಗೆದುಕೊಳ್ಳುವುದಿಲ್ಲ.

**(ಉ) <u>ದೈಹಿಕ ಶಿಕ್ಷಣ ಶಿಕ್ಷಕ ಗ್ರೇಡ್–1 ಹುದ್ದೆಗಳಿಗೆ (Physical Education Teacher Grade-I):–</u>**

**i)** ಭಾರತ ದೇಶದ ಕಾನೂನಿನಂತೆ ಸ್ಥಾಪಿಸಲ್ಪಟ್ಟ ಮತ್ತು ವಿಶ್ವವಿದ್ಯಾಲಯ ಧನ ಸಹಾಯ ಆಯೋಗದಿಂದ ಅಂಗೀಕೃತವಾದ ಒಂದು ವಿಶ್ವವಿದ್ಯಾಲಯದ "**ಬ್ಯಾಚಲರ್ ಪದವಿ**" ಯನ್ನು ಪಡೆದಿರಬೇಕು.

**ಮತ್ತು**

**ii)** ಭಾರತ ದೇಶದ ಕಾನೂನಿನಂತೆ ಸ್ಥಾಪಿಸಲ್ಪಟ್ಟ ಮತ್ತು ವಿಶ್ವವಿದ್ಯಾಲಯ ಧನ ಸಹಾಯ ಆಯೋಗದಿಂದ ಅಂಗೀಕೃತವಾದ ಒಂದು ವಿಶ್ವವಿದ್ಯಾಲಯದ "**ಬ್ಯಾಚಲರ್ ಆಫ್ ಫಿಸಿಕಲ್ ಎಜುಕೆಷನ್**" ಪದವಿಯನ್ನು ಪಡೆದಿರಬೇಕು. ಅಥವಾ **ಗೌರ್ನಮೆಂಟ್ ಕಾಲೇಜ್ ಆಫ್ ಫಿಸಿಕಲ್ ಎಜುಕೇಷನ್** ಇಲ್ಲಿಂದ **ಡಿಪ್ಲೋಮಾ ಇನ್ ಫಿಸಿಕಲ್ ಎಜುಕೇಷನ್** ಹೊಂದಿರಬೇಕು. ಅಥವಾ ರಾಜ್ಯ ಸರಕಾರವು ತತ್ಸಮಾನ ಪರೀಕ್ಷೆ ಎಂದು ಪರಿಗಣಿಸಿರುವ ವಿದ್ಯಾರ್ಹತೆಯನ್ನು ಹೊಂದಿರಬೇಕು.

ಆಯ್ಕೆ ಮತ್ತು ನೇಮಕಾತಿ ಪ್ರಕ್ರಿಯೆಯ ಯಾವುದೇ ಹಂತದಲ್ಲಿ ಆಯ್ಕೆಗೆ ಪರಿಗಣಿಸಿರುವ ಅಂಶಗಳ ಬಗ್ಗೆ ವ್ಯತ್ಯಾಸ ಕಂಡು ಬಂದಲ್ಲಿ ಅಥವಾ ಆಕ್ಷೇಪಣೆ ಸಲ್ಲಿಕೆಯಾದಲ್ಲಿ, ಕೋರ್ಟಿನ ತೀರ್ಮಗಳು, ಇಲಾಖೆ ಸುತ್ತೋಲೆಗಳು, ಸರ್ಕಾರದ ನಿರ್ದೇಶನಗಳು ಬಂದಲ್ಲಿ ಪ್ರಕಟಿಸಿರುವ ಪಟ್ಟಿಗಳಲ್ಲಿ ಸೂಕ್ತ ಬದಲಾವಣೆ ಮಾಡಿ ಆಯ್ಕೆ ಪಟ್ಟಿ ಪರಿಷ್ಕರಿಸುವ ಅಧಿಕಾರವನ್ನು ಆಯ್ಕೆ ಪ್ರಾಧಿಕಾರ ಹೊಂದಿರುತ್ತದೆ.

ನೇಮಕಾತಿ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಈ ಸಂಬಂಧ ಆಯ್ಕೆ ಪ್ರಾಧಿಕಾರಿ/ನೇಮಕಾತಿ ಪ್ರಾಧಿಕಾರಿಗಳು ನೀಡುವ ಸೂಚನೆಗಳನ್ನು ಇಲಾಖೆಯ ಅಧಿಕೃತ ವೆಬ್‌ಸೈಟ್‌ನಲ್ಲಿ (www.schooleducation.kar.nic.in) ಅವಲೋಕಿಸುವುದು.

**ಜಿ.ಎಂ. ವಿಜಯಕುಮಾರ್**
ಆಯ್ಕೆ ಪ್ರಾಧಿಕಾರಿ ಹಾಗೂ ಸಹನಿರ್ದೇಶಕರು,
ಸಾರ್ವಜನಿಕ ಶಿಕ್ಷಣ ಇಲಾಖೆ,
ಕಲುಬುರಗಿ ವಿಭಾಗ, ಕಲುಬುರಗಿ.

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) 500 ಪ್ರತಿಗಳು